**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳ ನ್ಯಾಯಾಲಯದಲ್ಲಿ ಗುಬ್ಬಿ**

ಉಪಸ್ಥಿತರುಃ ಶ್ರೀ ಹೆಚ್ ಮಹದೇವಪ್ಪ ಬಿ.ಎ.ಎಲ್.ಎಲ್.ಬಿ
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಗುಬ್ಬಿ

ದಿನಾಂಕಃ 10 ನೇ ಡಿಸೆಂಬರ್ ಮಾಹೇ 2014

ಕ್ರಿಮಿನಲ್ ಮಿಸ್ ನಂ 210/2010

ಅರ್ಜಿದಾರರುಃ 1. ಶ್ರೀಮತಿ ಅಕ್ಕಮಹಾದೇವಿ ( ಮಹಾಲಕ್ಷ್ಮೀ) ಕೋಂ
ಟಿ ಜಿ ಗಂಗಾಧರ್, ವಯಸ್ಸು 24 ವರ್ಷ,
ವಾಸಃ ಇರಕಸಂದ್ರ, ಚೇಳೂರು ಹೋಬಳಿ,
ಗುಬ್ಬಿ ತಾಲ್ಲೂಕು.
(ಅರ್ಜಿದಾರರ ಪರ ಶ್ರೀ ಬಿ ಎಸ್ ಎಂ ವಕೀಲರು)

ವಿರುದ್ಧ

ಎದುರುದಾರರುಃ ಟಿ.ಜಿ. ಗಂಗಾಧರ ಅಲಿಯಾಸ್ ಟಿ.ಜಿ. ಗಂಗಣ್ಣ ಬಿನ್
ಲೇಟ್ ಗಂಗಣ್ಣ, ವಯಸ್ಸು ಃ 33 ವರ್ಷ, ವ್ಯಾಪಾರ
ವಾಸ ಃ ಸಾತೇನ ಹಳ್ಳಿ ಗೇಟ್, ಇರಕಸಂದ್ರ ಮಜರೆ
ಚೇಳೂರು ಹೋಬಳಿ, ಗುಬ್ಬಿ ತಾಲ್ಲೂಕು.
( ಎದುರುದಾರರ ಪರ ಶ್ರೀ ಸಿ ಎಸ್ ಎ ವಕೀಲರು)

**ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರ ಕೆಳಗೆ ಸಲ್ಲಿಸಿದ ಅರ್ಜಿಯ ಮೇಲೆ ಮಾಡಲಾದ**

**ಆದೇಶ**

1. ಅರ್ಜಿದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರ ಕೆಳಗೆ ಅರ್ಜಿಯನ್ನು ಸಲ್ಲಿಸಿ ಎದುರುದಾರನಿಂದ ಪ್ರತಿ ತಿಂಗಳು 9,000/- ರೂ ಜೀವನಾಂಶ ಹಣವನ್ನು ಕೊಡಿಸಲು ಕೋರಿಕೊಂಡಿರುತ್ತಾರೆ. ಅರ್ಜಿಯ ವಿವರಣೆ ಈ ಕೆಳಗಿನಂತಿರುತ್ತದೆ.

2. ಅರ್ಜಿದಾರರು ಹಾಗೂ ಎದುರುದಾರರು ಗಂಡ-ಹೆಂಡತಿಯರಿದ್ದು ಇವರ ವಿವಾಹವು ದಿಃ 19-02-2009 ರಂದು ಶ್ರೀ ಶಿವ ಪಾರ್ವತಿ ಕಲ್ಯಾಣ ಮಂಟಪ, ಗುಬ್ಬಿ ತಾಲ್ಲೂಕು ಚೇಳೂರು ಗ್ರಾಮದಲ್ಲಿ ಹಿಂದು ಸಂಪ್ರದಾಯದ ಪ್ರಕಾರ ನೆರವೇರಿದ್ದು ಮದುವೆಯ ಎಲ್ಲಾ ಖರ್ಚು ವೆಚ್ಚಗಳನ್ನು ಅರ್ಜಿದಾರರ ತಂದೆ ತಾಯಿಗಳು ಮಾಡಿರುತ್ತಾರೆ. ಮದುವೆಯ ಕಾಲಕ್ಕೆ ಎದುರುದಾರನು 50,000-00 ರೂ ನಗದು ಒಂದು 15 ಗ್ರಾಂ ಕೊರಳ ಚೈನ್, 10 ಗ್ರಾಂ ನ ಉಂಗುರವನ್ನು ಕೇಳಿದ್ದು ಅರ್ಜಿದಾರರ ತಂದೆ – ತಾಯಿಗಳು ಅವರು ಕೇಳಿದ ಹಣ ಮತ್ತು ಒಡವೆಗಳನ್ನು ನೀಡಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ಅರ್ಜಿದಾರಳು ಎದುರುದಾರರ ಮನೆಯಲ್ಲಿ ಸಂಸಾರ ನಡೆಸಲು ಪ್ರಾರಂಭಿಸಿದರು ಆಗ ಎದುರುದಾರನು ಕೇವಲ 2 ತಿಂಗಳು ಮಾತ್ರ ಚೆನ್ನಾಗಿ ನೋಡಿಕೊಂಡು ನಂತರ ಅರ್ಜಿದಾರಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುವುದರ ಮೂಲಕ ಅರ್ಜಿದಾರಳಿಗೆ ಮೂಲ ಸೌಕರ್ಯಗಳನ್ನು ನೀಡದೆ ತಿರಸ್ಕಾರ ಮಾಡತೊಡಗಿದನು ಮತ್ತು ಎದುರುದಾರನು ಬಹಳಷ್ಟು ಜನ ಬೇರೆ ಹೆಣ್ಣು ಮಕ್ಕಳೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಾನೆ ಈ ಒಂದು ಕಾರಣದಿಂದ ಎದುರುದಾರನು ಅರ್ಜಿದಾರಳನ್ನು ನಿರ್ಲಕ್ಷಿಸಿರುತ್ತಾನೆ ಮತ್ತು ಎದುರುದಾರನಿಗೆ ಕುಡಿಯುವುದು, ಜೂಜಾಟ ಆಡುವ ಅಭ್ಯಾಸವಿರುತ್ತದೆ ಎದುರುದಾರನು ಪ್ರತಿದಿನ ಕುಡಿದು ಬಂದು ಅವಾಚ್ಯ ಶಬ್ದಗಳಿಂದ ಮಾತನಾಡುತ್ತಾ ಅರ್ಜಿದಾರಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ ಮತ್ತು ಎದುರುದಾರರಾದ ತಾಯಿ ಶ್ರೀಮತಿ ಚಂದ್ರಮ್ಮ, ತಂಗಿ ಮೀನಾಕ್ಷಿ ಮತ್ತು ಸಹೋದರ ರಾಜಣ್ಣ ಇವರು ಕುಮ್ಮಕ್ಕಿನಿಂದ ಎರಡನೇ ಮದುವೆಯೊಗಬೇಕು ಒಪ್ಪಿಗೆ ಕೊಡು ಎಂದು ಹಿಂಸೆ ನೀಡುವುದರ ಮೂಲಕ ಹೆಚ್ಚಿನ ವರದಕ್ಷಿಣೆ ನೀಡುವ ಮೂಲಕ ಹೊಡೆ ಬಡೆ ಮಾಡುವುದನ್ನು ಮಾಡುತ್ತಾರೆ. ಎದುರುದಾರನಿಗೆ 2 ಸ್ವಂತ ಮನೆಗಳು, ಅಂಗಡಿ, ಹಾಗೂ ಸಾತೇನ ಹಳ್ಳಿಯಲ್ಲಿ 2 ಎಕರೇ 10 ಗುಂಟೆ ಅಡಿಕೆ ತೋಟವಿದ್ದು ವಾರ್ಷಿಕವಾಗಿ 2 ಲಕ್ಷ ರೂ ಆದಾಯವಿರುತ್ತದೆ. ಮತ್ತು ಎದುರುದಾರನಿಗೆ ಸಿರಾ ಗೇಟ್ ತುಮಕೂರಿನಲ್ಲಿ ಮನೆ ಇದ್ದು ಬಾಡಿಗೆ ಬರುತ್ತದೆ ಅಲ್ಲದೇ ವ್ಯವಹಾರದಿಂದ, ಸಾತೇನಹಳ್ಳಿ ಇರುವ ಸ್ವಂತ ಅಂಗಡಿಯಿಂದ ತಿಂಗಳಿಗೆ ರೂ. 10,000-00 ಆದಾಯವಿರುತ್ತದೆ. ಆದ್ದರಿಂದ ಎದುರುದಾರನಿಗೆ ಜೀವನಾಂಶ ಕೊಡುವಷ್ಟು ಸಾಮರ್ಥ ಇರುತ್ತದೆ. ಅರ್ಜಿದಾರಳು ಸಂಪೂರ್ಣವಾಗಿ ಎದುರುದಾರನ ಆದಾಯವನ್ನೇ ಅವಲಂಬಿಸಿರುತ್ತಾಳೆ ಅರ್ಜಿದಾರಳಿಗೆ ಯಾವುದೇ ಆದಾಯ ಇರುವುದಿಲ್ಲ. ಎದುರುದಾರನು ಎರಡನೇ ಮದುವೆಯೊಗುವ ಉದ್ದೇಶದಿಂದ ಅರ್ಜಿದಾರಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾನೆ. ಈಗ್ಗೆ 1ವರೇ ತಿಂಗಳಿನ ಹಿಂದೆ

ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿದಾಗ ಅರ್ಜಿದಾರಳು ತೆಗೆದುಕೊಂಡು ಬರಲು ಸಾಧ್ಯವಿಲ್ಲ ಮತ್ತು ನಮ್ಮ ತಂದೆ – ತಾಯಿಗಳಿಗೆ ಹೆಚ್ಚಿನ ವರದಕ್ಷಿಣೆ ಹಣ ನೀಡುವಷ್ಟು ಸಾಮರ್ಥವಿರುವುದಿಲ್ಲ ಎಂದು ಹೇಳಿದ್ದಕ್ಕೆ ಅರ್ಜಿದಾರಳಿಗೆ ಹೊಡೆ - ಬಡಿ ಮಾಡಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ್ದರಿಂದ ಅರ್ಜಿದಾರರು ಬೇರೆ ಯಾವುದೇ ದಾರಿ ಇಲ್ಲದೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಈಗ ತಂದೆ ಮನೆಯಲ್ಲಿದ್ದಾಳೆ ಆದ್ದರಿಂದ ಅರ್ಜಿದಾರಳಿಗೆ ಪ್ರತಿ ತಿಂಗಳು ರೂ. 9,000-00 ಮನೆ ಬಾಡಿಗೆ ಮತ್ತು ಮೂಲ ಸೌಕರ್ಯಗಳಿಗೆ ಬೇಕಾಗಿರುವುದರಿಂದ ಜೀವನಾಂಶ ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

3. ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿದ ನಂತರ ಎದುರುದಾರನಿಗೆ ನೋಟೀಸ್ ನೀಡಲಾಗಿ ಎದುರುದಾರನು ತಮ್ಮ ಪರ ವಕೀಲರ ಮೂಲಕ ಹಾಜರಾಗಿ ಅರ್ಜಿಗೆ ತಕರಾರನ್ನು ಸಲ್ಲಿಸಿರುತ್ತಾರೆ.

4. ಎದುರುದಾರನು ತಮ್ಮ ತಕರಾರಿನಲ್ಲಿ ದಿನಾಂಕ : 19-02-2009 ರಂದು ಅರ್ಜಿದಾರಳೊಂದಿಗೆ ಹಿಂದೂ ಸಂಪ್ರದಾಯದ ಪ್ರಕಾರ ಚೇಳೂರಿನ ಶ್ರೀ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ನೆರವೇರಿರುವುದನ್ನು ಒಪ್ಪಿಕೊಂಡು ಅರ್ಜಿಯಲ್ಲಿಯ ಇತರ ಅಂಶಗಳನ್ನು ಅಲ್ಲಗಳೆಯುವ ಮೂಲಕ ಮುಂದುವರೆದು ತಕರಾರಿನಲ್ಲಿ ಹೇಳಿರುವ ಸಂಗತಿಗಳೆಂದರೆ ಎದುರುದಾರನ ತಾಯಿಯು ಬೆಳ್ಳಾವಿ ಬಾಲಕಿಯರ ವಸತಿ ನಿಲಯದಲ್ಲಿ ಡಿ ಗ್ರೂಪ್ ನೌಕರಳಿದ್ದು ಪ್ರತಿ ದಿನ ಸಾತೇ ಹಳ್ಳಿಯಿಂದ ಬೆಳ್ಳಾವಿಗೇ ಹೋಗಿ ಬರುವುದು ಮಾಡುತ್ತಾರೆ. ಅರ್ಜಿದಾರಳು ಯಾವುದೇ ಸಕಾರಣವಿಲ್ಲದೇ ಎದುರುದಾರರ ತಾಯಿಯೊಂದಿಗೆ ವಿನಾ ಕಾರಣ ಜಗಳ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದಾರೆ ಅಲ್ಲದೇ ಎದುರುದಾರನಿಗೆ ಊಟ ತಯೂರಿಸಿ, ಊಟ ನೀಡುವುದಿಲ್ಲ ಈ ಬಗ್ಗೆ ಸಾಕಷ್ಟು ಬಾರಿ ಎದುರುದಾರನ ಅರ್ಜಿದಾರಳಿಗೇ ಬುದ್ಧಿವಾದ ಹೇಳುವುದರ ಮೂಲಕ ತಾಯಿಯೊಂದಿಗೆ ವಿನಾ ಕಾರಣ ಜಗಳ ಮಾಡುವುದನ್ನು ಬಿಟ್ಟು ಹೊಂದಾಣಿಕೆ ಮಾಡಿಕೊಂಡು ಹೋಗು ಎಂದು ಹೇಳಿದರು ಸಹಾ ಬದಲಾವಣೆ ಮಾಡಿಕೊಳ್ಳಲಿಲ್ಲ ಮತ್ತು ಮನೆಯಲ್ಲಿ ಯಾವುದೇ ಕೆಲಸ ಮಾಡುವುದಿಲ್ಲ, ನಂತರ ಅರ್ಜಿದಾರಳು ಯಾವುದೇ ಕಾರಣವಿಲ್ಲದೆ ಎದುರುದಾರನಿಗೆ ಏನೂ ಹೇಳದೆ ಕೇಳದೆ ತಂದೆಯ ಮನೆಗೆ ಹೋಗಿ ಬರುವುದನ್ನು ಮಾಡುತ್ತಿದ್ದಳು. ಈ ವರ್ತನೆಯನ್ನು ತಿದ್ದಿಕೊಂಡು ಸಮಾಜದಲ್ಲಿ ಗೌರವವನ್ನು ಕಾಪಾಡು ಎಂದು ಹೇಳಿದರು ಸಹಾ ಯಾವುದೇ ಬದಲಾವಣೆ ಮಾಡಿಕೊಳ್ಳಲಿಲ್ಲ ಆದೂ ಅಲ್ಲದೇ ಯಾವಾಗಲು ಸಹಾ ಐಷಾರಾಮಿ ಜೀವನ ಮಾಡುವ ಮನಸ್ಸಿನವಳಿದ್ದು ಎದುರುದಾರನಿಗೆ ಹಳ್ಳಿಯಲ್ಲಿರುವುದು ಬೇಡ ತುಮಕೂರಿನಲ್ಲಿ ಮನೆ ಮಾಡು ಎಂದು ಹೇಳಿದಾಗ ಎದುರುದಾರನು

ಸಾಧ್ಯವಿಲ್ಲ ಎಂದು ಹೇಳಿದ್ದಕ್ಕೆ ಇದರಿಂದ ಸಿಟ್ಟಿಗೆದ್ದು ಹಳ್ಳಿಯಲ್ಲಿ ಜನಗಳ ಮುಂದೆ ಎದುರುದಾರನು ನನಗೆ ಹಿಂಸೆ ನೀಡುತ್ತಿದ್ದಾನೆ ಅವನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುತ್ತೇನೆಂದು ವಿಚಾರವನ್ನು ಊರಿನಲ್ಲಿ ಅಬ್ಬಿಸಿ ಎದುರುದಾರರು ಮುಜುಗರಕ್ಕೆ ಒಳಗಾಗುವಂತೆ ಮಾಡಿದ್ದಾರೆ. ಮತ್ತು ಈ ಬಗ್ಗೆ ಸಾಕಷ್ಟು ಬಾರಿ ಪಂಚಾಯಿತಿ ಮಾಡಿ ಅರ್ಜಿದಾರಳು ಎದುರುದಾರನೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗು ಎಂದು ಹೇಳಿದರು ಸಹಾ ಯಾವುದೇ ಬದಲಾವಣೆ ಮಾಡಿಕೊಳ್ಳದೆ ತಿರಸ್ಕಾರ ಮಾಡಿರುತ್ತಾಳೆ. ಎದುರುದಾರನು ಅರ್ಜಿದಾರಳಿಗೆ ನನ್ನ ತಾಯಿಗೆ ವಯಸ್ಸಾಗಿದ್ದು ಅವರಿಗೆ ಬಿ.ಪಿ. ಇದ್ದು ಈ ಎರಡು ವರ್ಷಗಳಿಂದಲೂ ಚಿಕಿತ್ಸೆಯಲ್ಲಿರುತ್ತಾರೆ ಮತ್ತು ಅವರಿಗೆ ಸ್ವತಂತ್ರವಾಗಿ ನೆಡೆದಾಡಲು ಮತ್ತು ಮನೆ ಕೆಲಸ ಮಾಡಿಕೊಳ್ಳಲು ಆಗುವುದಿಲ್ಲ ಆದ್ದರಿಂದ ಮನೆ ಕೆಲಸದಲ್ಲಿ ತಾಯಿಗೆ ಸಹಕರಿಸು ಎಂದು ಹೇಳಿದ್ದಕ್ಕೆ ತಿರಸ್ಕಾರ ಮಾಡಿರುತ್ತಾಳೆ ಮತ್ತು ಮನೆಯಿಂದ ತನ್ನಷ್ಟಕ್ಕೆ ತಾನೇ ಹೊರ ಹೋಗಿರುತ್ತಾಳೆ ಆದ್ದರಿಂದ ಎದುರುದಾರನು ಬೇರೆ ಯಾವುದೇ ದಾರಿ ಇಲ್ಲದೇ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯ ಗುಬ್ಬಿಯಲ್ಲಿ ಎಂ.ಸಿ. ನಂ : 16/2010 ಅರ್ಜಿ ಸಲ್ಲಿಸುವ ಮೂಲಕ ಅರ್ಜಿದಾರಳಿಂದ ವಿಚ್ಛೇದನ ಕೋರಿರುತ್ತಾನೆ. ಅರ್ಜಿದಾರಳು ಎದುರುದಾರನ ಮನೆಯಲ್ಲಿರುವ ತನಕ ಎದುರುದಾರರಿಗೆ ಮತ್ತು ಅವರ ತಾಯಿಗೆ ನಾನು ಆತ್ಮ ಹತ್ಯೆ ಮಾಡಿಕೊಳ್ಳುತ್ತೇನೆ, ಬಾವಿಗೆ ಬೀಳುತ್ತೇನೆ ಎಂದು ಭಯದಿಂದ ಮನೆಯಲ್ಲಿ ಬದುಕುವಂತೆ ಮಾಡುವುದರ ಮೂಲಕ ಕೆಟ್ಟ ವಾತಾವರಣ ಉಂಟು ಮಾಡಿದ್ದಾಳೆ ಮತ್ತು ಸಮಾಜದಲ್ಲಿ ಎದುರುದಾರನ ಗೌರವಕ್ಕೆ ಧಕ್ಕೆಯನ್ನುಂಟು ಮಾಡಿರುತ್ತಾಳೆ. ಎದುರುದಾರನಿಗೆ ಹಳ್ಳಿಯಲ್ಲಿ ಸ್ವಂತಕ್ಕೆ ಒಂದು ಹಳೇ ಮನೆ ಇದ್ದು ಚಾಲಕ ಕೆಲಸ ಮಾಡುತ್ತಿರುವುದನ್ನು ಹೊರತುಪಡಿಸಿ ಬೇರೆ ಏನೂ ಆದಾಯ ಇರುವುದಿಲ್ಲ. ಮತ್ತು ಜೀವನಾಂಶ ಕೊಡುವಷ್ಟು ಸಾಮರ್ಥವಿರುವುದಿಲ್ಲ ಆದ್ದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ.

5. ಅರ್ಜಿದಾರರು ಮತ್ತು ಎದುರುದಾರ ಈ ಮೇಲಿನ ಹೇಳಿಕೆಗಳಿಂದ ಕೆಳಗಿನ ಅಂಶಗಳು ನಿರ್ಣಯಕ್ಕೆ ಉದ್ಭವಿಸಿರುತ್ತವೆ.

1. ಅರ್ಜಿದಾರರು, ಎದುರುದಾರನು ತಮ್ಮ ಸಂರಕ್ಷಣೆಗೆ ಮಾಡಲು ತಿರಸ್ಕರಿಸಿರುತ್ತಾನೆ ಎಂದು ಸಿದ್ದಪಡಿಸಿದ್ದಾಳೆಯೇ?
2. ಅರ್ಜಿದಾರಳು ತಮ್ಮ ಅರ್ಜಿಯಲ್ಲಿ ಕೋರಿಕೊಂಡಿರುವಷ್ಟು ಪರಿಹಾರ ಪಡೆದುಕೊಳ್ಳಲು ಅರ್ಹಳಿರುತ್ತಾಳೆಯೇ?

3. ಯಾವ ಆದೇಶ ?

6. ಅರ್ಜಿದಾರಳು ಈ ಮೇಲಿನ ಅಂಶಗಳನ್ನು ಸಾಬೀತುಪಡಿಸಲು ಸ್ವತಃ ಆ ಸಾ 1 ಎಂದು ವಿಚಾರಣೆಗೆ ನಡೆದು ನಿ ಪಿ 1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ ಎದುರುದಾರನು ತಮ್ಮ ಪರ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಕರಾರನ್ನು ಸಲ್ಲಿಸುವ ಮೂಲಕ ನ್ಯಾಯಾಲಯದ ಮುಂದೆ ಆರ್.ಡಬ್ಲೂ. 1 ಎಂದು ವಿಚಾರಣೆಗೆ ನಡೆದು ನಿ ಪಿ ಆರ್ 1 ರಿಂದ 8 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ.

7. ಈ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಈ ನ್ಯಾಯಾಲಯ ಉತ್ತರಿಸಿದೆ.

ಅಂಶ ನಂ ಃ 1 ಸಕಾರಾತ್ಮಕವಾಗಿ

ಅಂಶ ನಂ ಃ 2 ಭಾಗಶಃ ಸಕಾರಾತ್ಮಕವಾಗಿ

ಅಂಶ ನಂ ಃ 3 ಮಾಡಲಾದ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿ.

## ಕಾರಣಗಳುಃ

8. ಅಂಶ ನಂ. 1 ಮತ್ತು 2 — ಈ ಎರಡು ಅಂಶಗಳು ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಒಟ್ಟಿಗೆ ಚರ್ಚಗೆ ತೆಗೆದುಕೊಳ್ಳಲಾಗಿದೆ ನ್ಯಾಯಾಲಯದ ಮುಂದೆ 1ನೇ ಅರ್ಜಿದಾರರು ಅ ಸಾ 1 ಎಂದು ವಿಚಾರಣೆಗಳಿಗೆ ಒಳಗಾಗಿ ನಿ ಪಿ 1 ರಿಂದ 4 ದಾಖಲೆಗಳನ್ನು ಗುರುತಿಸಿಕೊಳ್ಳುವ ಮೂಲಕ ತಮ್ಮ ಅರ್ಜಿಯಲ್ಲಿರುವ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ ಅರ್ಜಿದಾರರು ಹಾಗೂ ಎದುರುದಾರರು ಗಂಡ-ಹೆಂಡತಿಯರಿದ್ದು ಇವರ ವಿವಾಹವು ದಿಃ 19-02-2009 ರಂದು ಶ್ರೀ ಶಿವ ಪಾರ್ವತಿ ಕಲ್ಯಾಣ ಮಂಟಪ, ಗುಬ್ಬಿ ತಾಲ್ಲೂಕು ಚೇಳೂರು ಗ್ರಾಮದಲ್ಲಿ ಹಿಂದು ಸಂಪ್ರದಾಯದ ಪ್ರಕಾರ ನೆರವೇರಿದ್ದ ಮದುವೆಯ ಎಲ್ಲಾ ಖರ್ಚು ವೆಚ್ಚಗಳನ್ನು ಅರ್ಜಿದಾರರ ತಂದೆ ತಾಯಿಗಳು ಮಾಡಿರುತ್ತಾರೆ. ಮದುವೆಯ ಕಾಲಕ್ಕೆ ಎದುರುದಾರನು 50,000-00 ರೂ ನಗದು ಒಂದು 15 ಗ್ರಾಂ ಕೊರಳ ಚೈನ್, 10 ಗ್ರಾಂ ನ ಉಂಗುರವನ್ನು ಕೇಳಿದ್ದು ಅರ್ಜಿದಾರರ ತಂದೆ – ತಾಯಿಗಳು ಅವರು ಕೇಳಿದ ಹಣ ಮತ್ತು ಒಡವೆಗಳನ್ನು ನೀಡಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ಅರ್ಜಿದಾರಳು ಎದುರುದಾರರ ಮನೆಯಲ್ಲಿ ಸಂಸಾರ ನಡೆಸಲು ಪ್ರಾರಂಭಿಸಿದರು ಆಗ ಎದುರುದಾರನು ಕೇವಲ 2 ತಿಂಗಳು ಮಾತ್ರ ಚೆನ್ನಾಗಿ ನೋಡಿಕೊಂಡು ನಂತರ

ಅರ್ಜಿದಾರಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುವುದರ ಮೂಲಕ ಅರ್ಜಿದಾರಳಿಗೆ ಮೂಲ ಸೌಕರ್ಯಗಳನ್ನು ನೀಡದೆ ತಿರಸ್ಕಾರ ಮಾಡತೊಡಗಿದನು ಮತ್ತು ಎದುರುದಾರನು ಬಹಳಷ್ಟು ಜನ ಬೇರೆ ಹೆಣ್ಣು ಮಕ್ಕಳೊಂದಿಗೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದಾನೆ ಈ ಒಂದು ಕಾರಣದಿಂದ ಎದುರುದಾರನು ಅರ್ಜಿದಾರಳನ್ನು ನಿರ್ಲಕ್ಷಿಸಿರುತ್ತಾನೆ ಮತ್ತು ಎದುರುದಾರನಿಗೆ ಕುಡಿಯುವುದು, ಜೂಜಾಟ ಆಡುವ ಅಭ್ಯಾಸವಿರುತ್ತದೆ ಎದುರುದಾರನು ಪ್ರತಿದಿನ ಕುಡಿದು ಬಂದು ಅವಾಚ್ಯ ಶಬ್ದಗಳಿಂದ ಮಾತನಾಡುತ್ತಾ ಅರ್ಜಿದಾರಳಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದಾರೆ ಮತ್ತು ಎದುರುದಾರರಾದ ತಾಯಿ ಶ್ರೀಮತಿ ಚಂದ್ರಮ್ಮ, ತಂಗಿ ಮೀನಾಕ್ಷಿ ಮತ್ತು ಸಹೋದರ ರಾಜಣ್ಣ ಇವರು ಕುಮ್ಮಕ್ಕಿನಿಂದ ಎರಡನೆ ಮದುವೆಯೂಗಬೇಕು ಒಪ್ಪಿಗೆಕೊಡು ಎಂದು ಹಿಂಸೆ ನೀಡುವುದರ ಮೂಲಕ ಹೆಚ್ಚಿನ ವರದಕ್ಷಿಣೆ ನೀಡುವ ಮೂಲಕ ಹೊಡೆ - ಬಡೆ ಮಾಡುವುದನ್ನು ಮಾಡುತ್ತಾರೆ. ಎದುರುದಾರನಿಗೆ 2 ಸ್ವಂತ ಮನೆಗಳು, ಅಂಗಡಿ, ಹಾಗೂ ಸಾತೇನ ಹಳ್ಳಿಯಲ್ಲಿ 2 ಎಕರೇ 10 ಗುಂಟೆ ಅಡಿಕೆ ತೋಟವಿದ್ದು ವಾರ್ಷಿಕವಾಗಿ 2 ಲಕ್ಷ ರೂ ಆದಾಯವಿರುತ್ತದೆ. ಮತ್ತು ಎದುರುದಾರನಿಗೆ ಸಿರಾ ಗೇಟ್ ತುಮಕೂರಿನಲ್ಲಿ ಮನೆ ಇದ್ದು ಬಾಡಿಗೆ ಬರುತ್ತದೆ ಅಲ್ಲದೇ ವ್ಯವಹಾರದಿಂದ, ಸಾತೇನ ಹಳ್ಳಿ ಇರುವ ಸ್ವಂತ ಅಂಗಡಿಯಿಂದ ತಿಂಗಳಿಗೆ ರೂ. 10,000-00 ಆದಾಯವಿರುತ್ತದೆ. ಆದ್ದರಿಂದ ಎದುರುದಾರನಿಗೆ ಜೀವನಾಂಶ ಕೊಡುವಷ್ಟು ಸಾಮರ್ಥ ಇರುತ್ತದೆ. ಅರ್ಜಿದಾರಳು ಸಂಪೂರ್ಣವಾಗಿ ಎದುರುದಾರನ ಆದಾಯವನ್ನೆ ಅವಲಂಬಿಸಿರುತ್ತಾಳೆ ಅರ್ಜಿದಾರಳಿಗೆ ಯಾವುದೇ ಆದಾಯ ಇರುವುದಿಲ್ಲ. ಎದುರುದಾರನು ಎರಡನೇ ಮದುವೆಯೂಗುವ ಉದ್ದೇಶದಿಂದ ಅರ್ಜಿದಾರಳಿಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದಾನೆ. ಈಗ್ಗೆ 1 ವರೇ ತಿಂಗಳಿನ ಹಿಂದೆ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೇಳಿದಾಗ ಅರ್ಜಿದಾರಳು ತೆಗೆದುಕೊಂಡು ಬರಲು ಸಾಧ್ಯವಿಲ್ಲ ಮತ್ತು ನಮ್ಮ ತಂದೆ – ತಾಯಿಗಳಿಗೆ ಹೆಚ್ಚಿನ ವರದಕ್ಷಿಣೆ ಹಣ ನೀಡುವಷ್ಟು ಸಾಮರ್ಥವಿರುವುದಿಲ್ಲ ಎಂದು ಹೇಳಿದ್ದಕ್ಕೆ ಅರ್ಜಿದಾರಳಿಗೆ ಹೊಡೆ - ಬಡಿ ಮಾಡಿ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿದ್ದರಿಂದ ಅರ್ಜಿದಾರರು ಬೇರೆ ಯಾವುದೇ ದಾರಿ ಇಲ್ಲದೇ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ಈಗ ತಂದೆ ಮನೆಯಲ್ಲಿದ್ದಾಳೆ ಆದ್ದರಿಂದ ಅರ್ಜಿದಾರಳಿಗೆ ಪ್ರತಿ ತಿಂಗಳು ರೂ. 9,000-00 ಮನೆ ಬಾಡಿಗೆ ಮತ್ತು ಮೂಲ ಸೌಕರ್ಯಗಳಿಗೆ ಬೇಕಾಗಿರುವುದರಿಂದ ಜೀವನಾಂಶ ಬೇಕಾಗಿರುತ್ತದೆ ಎಂದು ಸಾಕ್ಷಿ ನುಡಿಯುವ ಮೂಲಕ ಮದುವೆ ಸಂಬಂಧಿಸಿದಂತೆ ಲಗ್ನ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ 1 ಎಂದು, ಎದುರುದಾರನಿಗೆ ಆಸ್ತಿ ಇದೆ ಎಂದು ತೋರಿಸಲು 2 ಪಹಣಿಗಳನ್ನು ಮತ್ತು 1 ಟ್ಯಾಕ್ಸ್ ಡಿಮಾಂಡ್ ಎಕ್ಸಟ್ರಾಕ್ಟ್‌ನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಪಿ 2 ರಿಂದ 4 ಎಂದು ಗುರುತಿಸಲಾಯಿತು.

ಪಾಟೀ ಸವಾಲಿನಲ್ಲಿ ನಾನು ಎದುರುದಾರರ ಮನೆಯಲ್ಲಿ ಕೇವಲ 6 ತಿಂಗಳು ಮಾತ್ರ ಜೀವನ ಮಾಡಿರುತ್ತೇನೆಂದರೆ ಸರಿ. ನನ್ನ ಅತ್ತೆ ಬೆಳ್ಳಾವಿ ಹುಡುಗಿಯರ ಹಾಸ್ಟೆಲ್‌ನಲ್ಲಿ ಅಡಿಗೆ ಕೆಲಸದಲ್ಲಿದ್ದಾರೆಂದರೆ ಸರಿ. ಅವರು ಪ್ರತಿ ದಿನ ಸಾತೇನಹಳ್ಳಿಯಿಂದ ಬೆಳ್ಳಾವಿಗೆ ಓಡಾಡುತ್ತಾರೆಂದರೆ ಸರಿ. ಆದ ಕಾರಣ ಅಡಿಗೆ ಕೆಲಸವನ್ನು ಮನೆಯಲ್ಲಿ ಮಾಡಬೇಕು ಎಂದು ಎದುರುದಾರ ನನಗೆ ಹೇಳುತ್ತಿದ್ದ ಎಂದರೆ ಸರಿ ಎಂದು ಒಪ್ಪಿಕೊಳ್ಳುವ ಮೂಲಕ ಇತರ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

9. ಎದುರುದಾರನು ಸ್ವತಃ ಆರ್ ಡಬ್ಲ್ಯೂ 1 ಎಂದು ವಿಚಾರಣೆಗೆ ಒಳಗಾಗುವುದರ ಮೂಲಕ ತಮ್ಮ ಸಾಕ್ಷ್ಯದಲ್ಲಿ ತಕರಾರಿನಲ್ಲಿನ ಸಂಗತಿಗಳನ್ನು ಪುನರುಚ್ಚರಿಸುವ ಮೂಲಕ ಸಾಕ್ಷ್ಯದಲ್ಲಿ ದಿನಾಂಕ : 19-02-2009 ರಂದು ಅರ್ಜಿದಾರಳೊಂದಿಗೆ ಹಿಂದೂ ಸಂಪ್ರದಾಯದ ಪ್ರಕಾರ ಚೇಳೂರಿನ ಶ್ರೀ ಶಿವ ಪಾರ್ವತಿ ಕಲ್ಯಾಣ ಮಂಟಪದಲ್ಲಿ ನೆರವೇರಿರುವುದನ್ನು ಒಪ್ಪಿಕೊಂಡು ಅರ್ಜಿಯಲ್ಲಿಯ ಇತರ ಅಂಶಗಳನ್ನು ಅಲ್ಲಗಳೆಯುವ ಮೂಲಕ ಮುಂದುವರೆದು ತಕರಾರಿನಲ್ಲಿ ಹೇಳಿರುವ ಸಂಗತಿಗಳೆಂದರೆ ಎದುರುದಾರನ ತಾಯಿಯು ಬೆಳ್ಳಾವಿ ಬಾಲಕಿಯರ ವಸತಿ ನಿಲಯದಲ್ಲಿ ಡಿ ಗ್ರೂಪ್ ನೌಕರಳಿದ್ದು ಪ್ರತಿ ದಿನ ಸಾತೇ ಹಳ್ಳಿಯಿಂದ ಬೆಳ್ಳಾವಿಗೆ ಹೋಗಿ ಬರುವುದು ಮಾಡುತ್ತಾರೆ. ಅರ್ಜಿದಾರಳು ಯಾವುದೆ ಸಕಾರಣವಿಲ್ಲದೆ ಎದುರುದಾರರ ತಾಯಿಯೊಂದಿಗೆ ವಿನಾ ಕಾರಣ ಜಗಳ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದಾರೆ ಅಲ್ಲದೇ ಎದುರುದಾರನಿಗೆ ಊಟ ತಯೂರಿಸಿ, ಊಟ ನೀಡುವುದಿಲ್ಲ ಈ ಬಗ್ಗೆ ಸಾಕಷ್ಟು ಬಾರಿ ಎದುರುದಾರನ ಅರ್ಜಿದಾರಳಿಗೆ ಬುದ್ಧಿವಾದ ಹೇಳುವುದರ ಮೂಾಲಕ ತಾಯಿಯೊಂದಿಗೆ ವಿನಾ ಕಾರಣ ಜಗಳ ಮಾಡುವುದನ್ನು ಬಿಟ್ಟು ಹೊಂದಾಣಿಕೆ ಮಾಡಿಕೊಂಡು ಹೋಗು ಎಂದು ಹೇಳಿದರು ಸಹಾ ಬದಲಾವಣೆ ಮಾಡಿಕೊಳ್ಳಲಿಲ್ಲ ಮತ್ತು ಮನೆಯಲ್ಲಿ ಯಾವುದೇ ಕೆಲಸ ಮಾಡುವುದಿಲ್ಲ. ನಂತರ ಅರ್ಜಿದಾರಳು ಯಾವುದೇ ಕಾರಣವಿಲ್ಲದೇ ಎದುರುದಾರನಿಗೆ ಏನೂ ಹೇಳದೆ ಕೇಳದೆ ತಂದೆಯ ಮನೆಗೆ ಹೋಗಿ ಬರುವುದನ್ನು ಮಾಡುತ್ತಿದ್ದಳು. ಈ ವರ್ತನೆಯನ್ನು ತಿದ್ದಿ ಕೊಂಡು ಸಮಾಜದಲ್ಲಿ ಗೌರವವನ್ನು ಕಾಪಾಡು ಎಂದು ಹೇಳಿದರು ಸಹಾ ಯಾವುದೇ ಬದಲಾವಣೆ ಮಾಡಿಕೊಳ್ಳಲಿಲ್ಲ ಆದೂ ಅಲ್ಲದೇ ಯಾವಾಗಲು ಸಹಾ ಐಷಾರಾಮಿ ಜೀವನ ಮಾಡುವ ಮನಸ್ಸಿನವಳಿದ್ದು ಎದುರುದಾರನಿಗೆ ಹಳ್ಳಿಯಲ್ಲಿರುವುದು ಬೇಡ ತುಮಕೂರಿನಲ್ಲಿ ಮನೆ ಮಾಡು ಎಂದು ಹೇಳಿದಾಗ ಎದುರುದಾರನು ಸಾಧ್ಯವಿಲ್ಲ ಎಂದು ಹೇಳಿದ್ದಕ್ಕೆ ಇದರಿಂದ ಸಿಟ್ಟಿಗೆದ್ದು ಹಳ್ಳಿಯಲ್ಲಿ ಜನಗಳ ಮುಂದೆ ಎದುರುದಾರನು ನನಗೇ ಹಿಂಸೆ ನೀಡುತ್ತಿದ್ದಾನೆ ಅವನ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುತ್ತೇನೆಂದು ವಿಚಾರವನ್ನು ಊರಿನಲ್ಲಿ ಅಬ್ಬಿಸಿ ಎದುರುದಾರರು ಮುಜುಗರಕ್ಕೆ ಒಳಗಾಗುವಂತೆ

ಮಾಡಿದ್ದಾರೆ. ಮತ್ತು ಈ ಬಗ್ಗೆ ಸಾಕಷ್ಟು ಬಾರಿ ಪಂಚಾಯಿತಿ ಮಾಡಿ ಅರ್ಜಿದಾರಳು ಎದುರುದಾರನೊಂದಿಗೆ ಚೆನ್ನಾಗಿ ಸಂಸಾರ ಮಾಡಿಕೊಂಡು ಹೋಗು ಎಂದು ಹೇಳಿದರು ಸಹಾ ಯೂವುದೇ ಬದಲಾವಣೆ ಮೂಡಿಕೊಳ್ಳದೇ ತಿರಸ್ಕಾರ ಮಾಡಿರುತ್ತಾಳೆ. ಎದುರುದಾರನು ಅರ್ಜಿದಾರಳಿಗೆ ನನ್ನ ತಾಯಿಗೆ ವಯಸ್ಸಾಗಿದ್ದು ಅವರಿಗೆ ಬಿ.ಪಿ. ಇದ್ದು ಈ ಎರಡು ವರ್ಷಗಳಿಂದಲೂ ಚಿಕಿತ್ಸೆಯಲ್ಲಿರುತ್ತಾರೆ ಮತ್ತು ಅವರಿಗೆ ಸ್ವತಂತ್ರವಾಗಿ ನೆಡೆದಾಡಲು ಮತ್ತು ಮನೆ ಕೆಲಸ ಮಾಡಿಕೊಳ್ಳಲು ಆಗುವುದಿಲ್ಲ ಆದ್ದರಿಂದ ಮನೆ ಕೆಲಸದಲ್ಲಿ ತಾಯಿಗೆ ಸಹಕರಿಸು ಎಂದು ಹೇಳಿದ್ದಕ್ಕೆ ತಿರಸ್ಕಾರ ಮಾಡಿರುತ್ತಾಳೆ ಮತ್ತು ಮನೆಯಿಂದ ತನ್ನಷ್ಟಕ್ಕೆ ತಾನೇ ಹೊರ ಹೋಗಿರುತ್ತಾಳೆ ಆದ್ದರಿಂದ ಎದುರುದಾರನು ಬೇರೆ ಯೂವುದೇ ದಾರಿ ಇಲ್ಲದೇ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಲಯ ಗುಬ್ಬಿಯಲ್ಲಿ ಎಂ.ಸಿ. ನಂ : 16/2010 ಅರ್ಜಿ ಸಲ್ಲಿಸುವ ಮೂಲಕ ಅರ್ಜಿದಾರಳಿಂದ ವಿಚ್ಛೇದನ ಕೋರಿರುತ್ತಾನೆ. ಅರ್ಜಿದಾರಳು ಎದುರುದಾರನ ಮನೆಯಲ್ಲಿರುವ ತನಕ ಎದುರುದಾರರಿಗೆ ಮತ್ತು ಅವರ ತಾಯಿಗೆ ನಾನು ಆತ್ಮ ಹತ್ಯೆ ಮಾಡಿಕೊಳ್ಳುತ್ತೇನೆ, ಬಾವಿಗೆ ಬೀಳುತ್ತೇನೆ ಎಂದು ಭಯದಿಂದ ಮನೆಯಲ್ಲಿ ಬದುಕುವಂತೆ ಮಾಡುವುದರ ಮೂಲಕ ಕೆಟ್ಟ ವಾತಾವರಣ ಉಂಟು ಮಾಡಿದ್ದಾಳೆ ಮತ್ತು ಸಮಾಜದಲ್ಲಿ ಎದುರುದಾರನ ಗೌರವಕ್ಕೆ ಧಕ್ಕೆಯನ್ನುಂಟು ಮಾಡಿರುತ್ತಾಳೆ. ಎದುರುದಾರನಿಗೆ ಹಳ್ಳಿಯಲ್ಲಿ ಸ್ವಂತಕ್ಕೆ ಒಂದು ಹಳೆ ಮನೆ ಇದ್ದು ಚಾಲಕ ಕೆಲಸ ಮಾಡುತ್ತಿರುವುದನ್ನು ಹೊರತುಪಡಿಸಿ ಬೇರೆ ಏನೂ ಆದಾಯ ಇರುವುದಿಲ್ಲ. ಮತ್ತು ಅರ್ಜಿದಾರರು ಮದುವೆಯ ಕಾಲಕ್ಕೆ ನನಗೆ 50,000-00 ರೂ. ನಗದು, 15 ಗ್ರಾಂ ಕೊರಳ ಚೈನ್ ಹಾಗೂ 10 ಗ್ರಾಂ ಚಿನ್ನದ ಉಂಗುರ ಕೊಟ್ಟಿರುವುದಿಲ್ಲ ಮತ್ತು ಅರ್ಜಿದಾರಳಿಗೆ ಅವರ ತಂದೆ ತಾಯಿಗಳು ಚಿನ್ನದ ಸರ ಓಲೆ ಜುಮುಕಿಯನ್ನು ಮಾತ್ರ ಕೊಟ್ಟಿರುತ್ತಾರೆ ಆದ್ದರಿಂದ ಜೀವನಾಂಶ ಕೊಡುವಷ್ಟು ಸಾಮರ್ಥವಿಲ್ಲದೆ ಇರುವುದರಿಂದ ಅರ್ಜಿಯನ್ನು ವಜಾ ಮಾಡಬೇಕೆಂದು ಸಾಕ್ಷಿ ನುಡಿದಿದ್ದು ಪಾಟೀ ಸವಾಲಿನಲ್ಲಿ ಸಾಕ್ಷಿಯು ಸಾತೇನ ಹಳ್ಳಿಯ ಸರ್ವೇ ನಂ: 54/8 ರಲ್ಲಿ 1 ಎಕರೆ 20 ಗುಂಟೆ, 51 / 5 ರಲ್ಲಿ 20 ಗುಂಟೆ ಜಮೀನನ್ನು ನಾನು ಕ್ರಯಕ್ಕೆ ಕೊಂಡಿರುತ್ತೇನೆಂದರೆ ಸರಿ. ಸದರಿ ಆಸ್ತಿಗಳಲ್ಲಿ 700 ರಿಂದ 800 ಅಡಿಕೆ ಸಸಿಗಳು ಇರುತ್ತವೆ ಮತ್ತು 2010 ರಿಂದ ನಾನು ಅರ್ಜಿದಾರಳಿಗೆ ಜೀವನಾಂಶ ನೀಡಿಲ್ಲ ಎಂದರೆ ಸರಿ. ಎಂದು ಒಪ್ಪಿಕೊಳ್ಳುವ ಮೂಲಕ ಇತರ ಅಂಶಗಳನ್ನು ಅಲ್ಲಗಳೆದಿರುತ್ತಾರೆ. ಈ ಸಾಕ್ಷಿಯ ಸಾಕ್ಷ್ಯವನ್ನು ಗಮನಿಸಿದಾಗ ಎದುರುದಾರರಿಗೆ ಜೀವನಾಂಶ ಕೊಡುವಷ್ಟು ಸಾಮರ್ಥ ಇದೆ ಎಂದು ತಿಳಿದುಬರುತ್ತದೆ.

**10. ಈ ಮೇಲಿನ ಅರ್ಜಿದಾರರ ಮತ್ತು ಎದುರುದಾರರ ಸಾಕ್ಷ್ಯ ಹಾಗೂ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ಅರ್ಜಿದಾರರ ಹಾಗೂ ಎದುರುದಾರರ ವಿವಾಹದ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ, ಎದುರುದಾರನು ದುಶ್ಚಟಗಳಿಗೆ ಬಲಿಯಾಗಿ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಹಿಂಸೆ ನೀಡಲು ಪ್ರಾರಂಭಿಸಿದಾಗ ಅರ್ಜಿದಾರಳು ನಮ್ಮ ತಂದೆ – ತಾಯಿಗಳು ಅಷ್ಟೊಂದು ಸ್ಥಿತಿವಂತರಿರುವುದಿಲ್ಲ ಹಾಗಾಗಿ ಹೆಚ್ಚಿನ ವರದಕ್ಷಿಣೆ ಹಣ ತಂದು ಕೊಡಲು ಸಾಧ್ಯವಿಲ್ಲ ಎಂದು ಹೇಳಿದ್ದಕ್ಕೆ ಅರ್ಜಿದಾರರರಿಗೆ ಮೂಲ ಸೌಕರ್ಯಗಳಾದ ಊಟ, ಬಟ್ಟೆ, ವಸತಿ, ಔಷಧಿ ಹಾಗೂ ವಿದ್ಯಾಭ್ಯಾಸಕ್ಕೆ ಬೇಕಾದ ಖರ್ಚು ವೆಚ್ಚಗಳನ್ನು ಕೊಡದೇ ನಿರ್ಲಕ್ಷಿಸಿರುತ್ತಾನೆ ಎಂಬುದು ಅರ್ಜಿದಾರರ ಸಾಕ್ಷ್ಯದಿಂದ ಕಂಡು ಬರುತ್ತದೆ. ಎದುರುದಾರನಿಗೆ ಸಾಕಷ್ಟು ಆದಾಯವಿದೆ ಎಂದು ತೋರಿಸಲು ನಿ ಪಿ 2 ಮತ್ತು 3 ಪಹಣಿಗಳು, ನಿ ಪಿ 4 ಡಿಮ್ಯಾಂಡ್ ರಿಜಿಸ್ಟರ್ ಎಕ್ಸಾಟ್ರಾಕ್ಟ್ ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಮತ್ತು ಎದುರುದಾರನು ಡ್ರೈವರ್ ಕೆಲಸ ಮಾಡುತ್ತಿರುವುದರಿಂದ ಜೀವನಾಂಶ ಕೊಡುವಷ್ಟು ಆದಾಯ ಇದೆ ಎಂದು ಕಂಡು ಬರುತ್ತದೆ. ಎದುರುದಾರನು ಅರ್ಜಿದಾರಳ ತಂದೆಗೆ ಸಾಕಷ್ಟು ಆದಾಯ ಇದೇ ಎಂದು ತೋರಿಸಲು ತಂದೆಯ ಹೆಸರಿನಲ್ಲಿರುವ ಆಸ್ತಿಗಳಿಗೆ ಸಂಬಂಧಿಸಿದ ನಿ.ಪಿ. ಆರ್ 1 ರಿಂದ 6 ಪಹಣಿಗಳನ್ನು ಹಾಜರುಪಡಿಸಿರುತ್ತಾರೆ. ಅದೇ ರೀತಿ ನಿ ಪಿ ಆರ್ 7 ನೋಂದಾಯಿತ ಕ್ರಯಪತ್ರವನ್ನು ಮತ್ತು ನಿ ಪಿ ಆರ್ 8 ನೋಂದಾಯಿತ ದಾನ ಪತ್ರವನ್ನು ಹಾಜರುಪಡಿಸಿರುವುದರ ಮೂಲಕ ಅರ್ಜಿದಾರಳ ತಂದೆಗೆ ಸಾಕಷ್ಟು ಆದಾಯ ಇರುತ್ತದೆ. ಆದ್ದರಿಂದ ಅರ್ಜಿದಾರಳಿಗೆ ಜೀವನಾಂಶದ ಅವಶ್ಯಕತೆ ಇರುವುದಿಲ್ಲ. ಎದುರುದಾರನಿಗೆ ಸಂಬಂಧಿಸಿದಂತೆ ನಿ.ಪಿ.ಆರ್ 7 ರ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿ ಇರುವುದಿಲ್ಲ ನಿ.ಪಿ.ಆರ್. 8 ರ ಆಸ್ತಿಯನ್ನು ಎದುರುದಾರನು ತನ್ನ ಸಹೋದರಿ ಮಹಾಲಕ್ಷ್ಮೀಗೆ ದಿಃ 08-07-2010 ರಂದು ದಾನ ಪತ್ರದ ಮೂಲಕ ಸ್ವಾಧೀನಕ್ಕೆ ನೀಡಲಾಗಿದೆ. ಆದ್ದರಿಂದ ಎದುರುದಾರನು ಜೀವನಾಂಶ ಕೊಡುವ ಸಾಮರ್ಥ್ಯ ಇಲ್ಲದೇ ಇರುವುದರಿಂದ ಮತ್ತು ಅರ್ಜಿದಾರಳೆ ಎದುರುದಾರನ ಮನೆಯಲ್ಲಿದ್ದಾಗ ಅಕ್ಕಪಕ್ಕದವರ ಮತ್ತು ಸಂಬಂಧಿಕರ ಎದುರಿಗೆ ಮುಜುಗರ ಉಂಟಾಗುವಂತೆ ನಡೆದುಕೊಂಡು ಮನೆ ಬಿಟ್ಟು ಹೋಗಿರುತ್ತಾಳೆ ಎಂದು ತಿಳಿಸಿರುತ್ತಾರೆ. ಅರ್ಜಿದಾರಳು ಮತ್ತು ಎದುರುದಾರನು ಹಾಜರುಪಡಿಸಿರುವ ದಾಖಲೆಗಳನ್ನು ಮತ್ತು ನುಡಿದಿರುವ ಸಾಕ್ಷ್ಯ ಹಾಗೂ ಪಾಟೀ ಸವಾಲಿನಲ್ಲಿ ಒಪ್ಪಿಕೊಂಡಿರುವ ಸಂಗತಿಗಳನ್ನು ಗಮನಿಸಿದಾಗ ಎದುರುದಾರನು ಅರ್ಜಿದಾರಳನ್ನು ನಿರ್ಲಕ್ಷಿಸಿ ಮೂಲ ಸೌರ್ಯಗಳನ್ನು ನೀಡದೆ ಮನೆಯಿಂದ ಹೊರ ಹಾಕಿರುವುದು ಕಂಡು ಬರುವುದರಿಂದ ಎದುರುದಾರನು ಅರ್ಜಿದಾರಳಿಗೆ ಜೀವನಾಂಶ ಕೊಡುವುದು ಎದುರುದಾರನ**

ಕರ್ತವ್ಯವಾಗಿರುವುದರಿಂದ ಮತ್ತು ಎದುರುದಾರನು ಜೀವನಾಂಶ ಕೊಡುವ ಸಾಮರ್ಥ್ಯವನ್ನು ಹೊಂದಿರುವುದರಿಂದ ಈಗಿನ ವ್ಯವಸ್ಥೆಯಲ್ಲಿ ಒಬ್ಬ ಕನಿಷ್ಟ ಮೊತ್ತದ ಜೀವನ ನಿರ್ವಹಣೆ ಮಾಡಲು ಎಷ್ಟು ಹಣದ ಅವಶ್ಯಕತೆ ಇದೆ ಎನ್ನುವುದನ್ನು ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಂಡು ಅರ್ಜಿದಾರಳು ತಮ್ಮ ಅರ್ಜಿಯಲ್ಲಿ ಕೋರಿಕೊಂಡಿರುವಷ್ಟು ಜೀವನಾಂಶ ಪಡೆಯಲು ಅರ್ಹಳು ಇಲ್ಲದೆ ಇದ್ದರೂ ಸಹಾ ಭಾಗಶಃ ಎಂದರೆ ಅರ್ಜಿದಾರಳು ಪ್ರತಿ ತಿಂಗಳು ರೂ. 2,000-00 ರೂ ಜೀವನಾಂಶ ಹಣವನ್ನು ಈ ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ಪಡೆಯಲು ಅರ್ಹಳಿರುವುದರಿಂದ ಅಂಶ ನಂಬರ್ 1 ಮತ್ತು 2ನ್ನು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

ಅಂಶ ನಂ : 3 ಮೇಲಿನ 1 ಮತ್ತು 2ನೇ ಅಂಶದ ಮೇಲೆ ಬಂದ ಉತ್ತರಗಳಿಂದ ಮಾಡಲಾದ,

## ಆದೇಶ

ಅರ್ಜಿದಾರರು ಎದರುದಾರರ ವಿರುದ್ದ ದಂಡ ಪ್ರಕ್ರಿಯಾ ಸಂಹಿತೆ ಕಲಂ 125 ರ ಕೆಳಗೆ ಸಲ್ಲಿಸುವ ಜೀವನಾಂಶ ಅರ್ಜಿಯನ್ನು ಖರ್ಚು ಸಹಿತ ಭಾಗಶಃ ಪುರಸ್ಕರಿಸಲಾಗಿದೆ.

ಎದುರುದಾರನು ಅರ್ಜಿದಾರಳಿಗೆ ಪ್ರತಿ ತಿಂಗಳು ರೂ 2,000/- ಜೀವನಾಂಶವನ್ನು ಹಣವನ್ನು ಈ ಅರ್ಜಿಯನ್ನು ದಾಖಲು ಮಾಡಿದ ದಿನಾಂಕದಿಂದ ನೀಡತಕ್ಕದ್ದು ಎಂದು ನಿರ್ದೇಶಿಸಲಾಗಿದೆ. ಎದುರುದಾರನು ಅರ್ಜಿದಾರರಿಗೆ ಈ ಅರ್ಜಿಯ ಖರ್ಚು ರೂ. 300-00 ಗಳನ್ನು ಪಾವತಿಸತಕ್ಕದ್ದು

(ಬೆರಳಚ್ಚುಗಾರ್ತಿಗೆ ಉಕ್ತಲೇಖನ ನೀಡಿ ಅವರು ಗಣಕೀಕೃತ ಮಾಡಿದ ನಂತರ ಸೂಕ್ತ ತಿದ್ದುಪಡಿ ಮಾಡಿ ದಿಃ 10-12-2014 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಿದೆ.

(ಹೆಚ್ ಮಹದೇವಪ್ಪ)
ಅಧಿಕ ಸಿವಿಲ್ ಜಡ್ಜ ಮತ್ತು ಜೆಎಂಎಫ಼ಸಿ, ಗುಬ್ಬಿ.

## ಅನುಬಂಧ

1. ಅರ್ಜಿದಾರ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ

   ಶ್ರೀಮತಿ ಅಕ್ಕಮಹಾದೇವಿ, ಪಿ ಡಬ್ಲ್ಯೂ 1

2. ಅರ್ಜಿದಾರರ ಪರ ವಿಚಾರಣೆಗೊಳಪಡಿಸಲಾದ ದಾಖಲೆಗಳ ಪಟ್ಟಿ

   ನಿ ಪಿ 1 - ಲಗ್ನ ಪತ್ರಿಕೆ

   ನಿ ಪಿ 2 ಮತ್ತು 3 - ಪಹಣಿಗಳು

   ನಿ ಪಿ 4 - ಟ್ಯಾಕ್ಸ್ ಡಿಮಾಂಡ್ ಎಕ್ಸಾಟ್ರಾಕ್ಟ್

3. ಎದುರುದಾರನ ಪರ ವಿಚಾರಣೆ ಮಾಡಲಾದ ಸಾಕ್ಷಿದಾರರ ಪಟ್ಟಿ :-

   ಆರ್ ಡಬ್ಲ್ಯೂ 1 - ಗಂಗಾಧರ

4. ಎದುರುದಾರರ ಪರ ಹಾಜರುಪಡಿಸಲಾದ ದಾಖಲೆಗಳ ಪಟ್ಟಿ :-

   ನಿ ಪಿ ಆರ್ 1 ರಿಂದ 6 - 6 ಪಹಣಿಗಳು

   ನಿ ಪಿ ಆರ್ 7 – ನೋಂದಾಯಿತ ಕ್ರಯಪತ್ರ

   ನಿ ಪಿ ಆರ್ 8 - ನೋಂದಾಯಿತ ದಾನ ಪತ್ರ

(ಹೆಚ್ ಮಹದೇವಪ್ಪ)
ಅಧಿಕ ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ, ಗುಬ್ಬಿ